<u>ಅರಸೀಕೆರೆ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯದಲ್ಲಿ</u>

<u>ಸಿ.ಸಿ. ನಂ: **216/20**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | ಚಿದಾನಂದ | ಸಿ.ಡಬ್ಲ್ಯೂ- | 11 |
| ತಂದೆ/ಗಂಡನ ಹೆಸರು | ನಿರ್ವಾಣೇಗೌಡ | ಪಿ.ಡಬ್ಲ್ಯೂ | 6 |
| ವಯಸ್ಸು | 64 ವರ್ಷ | ಪ್ರಮಾಣ ವಚನ ಭೋಧಿಸಿದ ದಿನಾಂಕ | |
| ವೃತ್ತಿ | ನಿವೃತ್ತ ಎ.ಎಸ್.ಐ | | |
| ವಾಸ | ಅರಸೀಕೆರೆ | 23.09.2025 | |

**-:ಮುಖ್ಯ ವಿಚಾರಣೆ ಸಸಅ ರವರಿಂದ:-**

ನಾನು 2018 ರಿಂದ 2021 ರವರೆಗೆ ಅರಸೀಕೆರೆ ನಗರ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ:30-12-2019 ರಂದು ನಾನು ನನ್ನ ಠಾಣೆಯಲ್ಲಿದ್ದಾಗ ಚಾಸಾ-1 ರವರು ಕೊಟ್ಟ ವರದಿ, ಮುದ್ದೆ ಮಾಲು ಹಾಗೂ ಆರೋಪಿತರನ್ನು ಹಾಜರುಪಡಿಸಿದ್ದು ಆ ವರದಿಯಂತೆ ಅದನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನಾ ನಂ: 210/19 ನ್ನು ದಾಖಲು ಮಾಡಿರುತ್ತೇನೆ. ಚಾಸಾ-1 ರವರು ನೀಡಿದ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು, ಚಾಸಾ-1 ರವರ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ನಾನು ದಾಖಲು ಮಾಡಿರುವ ಪ್ರ.ವ.ವರದಿಯನ್ನು ನಿ.ಪಿ.8 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಾನು ದೂರನ್ನು ಹಾಗೂ ಪ್ರ.ವ.ವರದಿಯನ್ನು ನನ್ನ ಮೇಲಾಧಿಕಾರಿಗಳಿಗೆ ಹಾಗೂ ಈ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.

ನಂತರ ಆರೋಪಿತರಿಬ್ಬರ ಸ್ವಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ. 1 ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ನಿಪಿ-9 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು, ಅದರಲ್ಲಿರುವ 1 ನೇ ಆರೋಪಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. 2 ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ನಿಪಿ-10 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು, ಅದರಲ್ಲಿರುವ 2 ನೇ ಆರೋಪಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಸಂಜೆ 6-30 ರಿಂದ 7-00 ಗಂಟೆಯವರೆಗೆ ಚಾಸಾ-1 ರವರು ಹಾಜರುಪಡಿಸಿದ ಬೈಕ್ ನಂ. ಕೆಎ-54-ಹೆಚ್-5360, 4 ಕೆ.ಜಿ. 300 ಗ್ರಾಂ ತೂಕದ 7 ಗಂಧದ ತುಂಡುಗಳು, 11 ಕೆ.ಜಿ. 300 ಗ್ರಾಂ ಗಂಧದ ಚೆಕ್ಕೆಗಳನ್ನು ಅಮಾನತ್ತುಪಡಿಸಿಕೊಂಡು ನಿಪಿ-1 ರಂತೆ ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ 1 ಫೋಟೋ ತೆಗೆದಿರುತ್ತೇನೆ. ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ನಿಪಿ-2 ರಂತೆ ಫೋಟೋ ತೆಗೆದಿರುತ್ತೇನೆ. ನಂತರ ಮುದ್ದೆ

ಮಾಲನ್ನು ಫಿ.ಎಫ್. ಗೆ ಅಳವಡಿಸಿರುತ್ತೇನೆ. 4 ಕೆ.ಜಿ. 300 ಗ್ರಾಂ ತೂಕದ 7 ಗಂಧದ ತುಂಡುಗಳನ್ನು ಮು.ಮಾ-1 ಎಂದು, 11 ಕೆ.ಜಿ. 300 ಗ್ರಾಂ ಗಂಧದ ಚೆಕ್ಕೆಗಳನ್ನು ಮು.ಮಾ-2 ಎಂದು ಗುರುತಿಸಲಾಯಿತು.

ನಂತರ ಆರೋಪಿತರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನಮ್ಮ ಠಾಣೆಯಲ್ಲಿ ಇಟ್ಟುಕೊಂಡಿರುತ್ತೇನೆ. ಬೆಳಗ್ಗೆ 6-30 ಗಂಟೆಗೆ ಆರೋಪಿತರಿಬ್ಬರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ನಿಪಿ-3 ರಂತೆ ಬೆಳಗ್ಗೆ 10-15 ರಿಂದ 11-15 ಗಂಟೆಯವರೆಗೆ ಪಂಚರ ಸಮಕ್ಷಮ ಸ್ಥಳ ಮಹಜರ್ ನ್ನು ಮಾಡಿ ಒಂದು ಮರದ ಹಿಡಿ ಇರುವ 1 ಮಚ್ಚು, ಗರಗಸ, 1 ರಾಡು ನ್ನು ಅಮಾನತ್ತುಪಡಿಸಿಕೊಂಡು 2 ಫೋಟೋಗಳನ್ನು ತೆಗೆದಿರುತ್ತೇನೆ. ನಿಪಿ-3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಫೋಟೋಗಳನ್ನು ಈಗಾಗಲೇ ನಿಪಿ-4 ಹಾಗೂ 5 ಎಂದು ಗುರುತಿಸಲಾಗಿದೆ. ನಂತರ ಠಾಣೆಗೆ ಬಂದು ಫಿ.ಎಫ್. ಹಾಕಿರುತ್ತೇನೆ.ಒಂದು ಮರದ ಹಿಡಿ ಇರುವ 1 ಮಚ್ಚುನ್ನು ಮು.ಮಾ-3 ಎಂದು, ಗರಗಸವನ್ನು ಮು.ಮಾ-4 ಎಂದು ಮತ್ತು 1 ರಾಡ್ ನ್ನು ಮು.ಮಾ-5 ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಬೈಕ್ ನ್ನು ಸಂಬಂಧಪಟ್ಟ ಅರಣ್ಯ ಇಲಾಖೆಗೆ ಒಪ್ಪಿಸಿರುತ್ತೇನೆ. ಆರೋಪಿತರ ಮೇಲೆ ದಸ್ತಗಿರಿ ಕ್ರಮ ಅನುಸರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಸಾಕ್ಷಿದಾರರಾದ ಚಾಸಾ-1 ರಿಂದ 4 ಮತ್ತು 7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ವಶಪಡಿಸಿಕೊಂಡ ಗಂಧದ ಚಕ್ಕೆ ಮತ್ತು ತುಂಡುಗಳ ಮೌಲ್ಯಮಾಪನಕ್ಕಾಗಿ ಅರಣ್ಯ ಇಲಾಖೆಗೆ ಪತ್ರ ಬರೆದಿರುತ್ತೇನೆ. ಸದರಿ ಪತ್ರಕ್ಕೆ ಅರಣ್ಯ ಇಲಾಖೆಯವರು ಪತ್ರ ಬರೆದಿದ್ದು ಸದರಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ನಗರ ಸಭೆಯಿಂದ ಕೃತ್ಯ ನಡೆದ ಸ್ಥಳದ ಖಾತಾ ನಕಲನ್ನು ಪಡೆದಿದ್ದು ಅದನ್ನು ನಿಪಿ-12 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಅವರ ವಿರುದ್ಧ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಚಾಸಾ-7 ರವರು ನನಗೆ ನಿಪಿ-6 ರಂತೆ ಹೇಳಿಕೆ ಕೊಟ್ಟಿರುತ್ತಾರೆ.

<u>ಪಾಟೀ ಸವಾಲು ಶ್ರೀ ಆರ್.ಎಲ್. ವಕೀಲರಿಂದಃ-</u>

ಆರೋಪಿತರನ್ನು ಹಿಡಿದಾಗ ಹಿಡಿದ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ. ಅವರನ್ನು ಠಾಣೆಗೆ ಕರೆದುಕೊಂಡು ಬಂದ ನಂತರ ನಿಪಿ-1 ರಂತೆ ಮಹಜರ್ ಮಾಡಿರುತ್ತೇನೆ. ಸ್ಥಳದಲ್ಲಿಯೇ ಚಾಸಾ-1 ರವರೇ ಸದರಿ ಮಹಜರ್ ಕ್ರಮ ಜರುಗಿಸಬಹುದಾಗಿತ್ತು ಎಂದರೆ ಸರಿ. ಗಂಧದ ಮರ ಇರುವ ಪ್ರದೇಶದಲ್ಲಿ

ಆರೋಪಿತರು ಸಿಕ್ಕಿಲ್ಲ ಎಂದರೆ ಸರಿ. ಸಾಕ್ಷಿದಾರರ ಹೇಳಿಕೆಗಳನ್ನು ಕೇಸಿಗೆ ಅನುಕೂಲ ಆಗುವಂತೆ ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿಪಿ-**3** ರಂತೆ ಮಹಜರ್ ಮಾಡುವಾಗ ನಾನು ಆರೋಪಿತರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ಮಾಡಿರುತ್ತೇನೆ. ಆರೋಪಿತರೇ ಮು.ಮಾ-**3** ರಿಂದ **5** ನ್ನು ತಾವು ಮುಚ್ಚಿಟ್ಟಿದ್ದ ಸ್ಥಳದಿಂದ ತಂದು ಹಾಜರುಪಡಿಸಿರುತ್ತಾರೆ. ಮುಚ್ಚಿಟ್ಟಿದ್ದ ಸ್ಥಳದ ಪ್ರತ್ಯೇಕ ಮಹಜರ್ ಮಾಡಿರುವುದಿಲ್ಲ. ಮುದ್ದೆ ಮಾಲುಗಳ ಮೇಲೆ ಪಂಚರ ಸಹಿಗಳನ್ನು ಪಡೆದಿಲ್ಲ ಎಂದರೆ ಸರಿ. ಸ್ಯಾಂಪಲ್ ಗೋಸ್ಕರ ನಾವೇನು ಪ್ರತ್ಯೇಕವಾಗಿ ಗಂಧದ ತುಂಡುಗಳನ್ನು ಕತ್ತರಿಸಿ ಪಡೆದುಕೊಂಡಿಲ್ಲ. ಪ್ರತಿಯೊಂದು ತುಂಡುಗಳ ಮೇಲೆ ಕೆಂಪು ಶಾಹಿಯಿಂದ ಸಂಖ್ಯೆಗಳನ್ನು ಕೊಟ್ಟಿರುತ್ತೇನೆ. ಉಳಿದ ಗಂಧದ ತುಂಡುಗಳನ್ನು ಅರಸೀಕೆರೆ ರೇಂಜ್ ಫಾರೆಸ್ಟ್ ರವರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಮ್ಮ ಠಾಣಾ ರೈಟರ್ ಅವುಗಳ ಅಳತೆ ಮಾಡಿ ಅವುಗಳನ್ನು ನಮೂದಿಸಿರುತ್ತಾರೆ. ಅರಣ್ಯ ಇಲಾಖೆಗೆ ವಶಪಡಿಸಿಕೊಂಡ ಸಂಪೂರ್ಣ ಮರದ ತುಂಡು ಹಾಗೂ ಚೆಕ್ಕೆ ಗಳನ್ನು ಕೊಟ್ಟಿದ್ದು ಅವರು ಮೌಲ್ಯ ಮಾಪನ ಮಾಡಿ ಪುನಃ ನಮ್ಮ ವಶಕ್ಕೆ ಕೊಟ್ಟಿರುತ್ತಾರೆ.

ವಶಪಡಿಸಿಕೊಂಡ ಮರದ ತುಂಡುಗಳು ಅದೇ ಮರದ್ದು ಎಂದು ನಾವು ವರದಿ ಪಡೆದುಕೊಂಡಿಲ್ಲ. ಆ ಸ್ಥಳದ ಅಕ್ಕ ಪಕ್ಕ ಮನೆಗಳು ಇವೆ ಎಂದರೆ ಸರಿ. ಕೃತ್ಯ ನಡೆದ ಸ್ಥಳದ ಮಾಲೀಕರನ್ನು ಮಾತ್ರ ವಿಚಾರಣೆ ಮಾಡಿದ್ದು ಬೇರೆಯವರನ್ನು ಮಾಡಿಲ್ಲ. ಆರೋಪಿತರೇ ಸದರಿ ಮರವನ್ನು ಕತ್ತರಿಸಿರುತ್ತಾರೆಂದು ನೋಡಿದವರು ಯಾವ ಸಾಕ್ಷಿದಾರರು ಇಲ್ಲ. ಆ ಸ್ಥಳದ ಅಕ್ಕ ಪಕ್ಕ ಸಿ.ಸಿ. ಕ್ಯಾಮರಾ ಇರುವ ಬಗ್ಗೆ ತನಿಖೆ ಮಾಡಿಲ್ಲ. ನಾನು ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಅವುಗಳನ್ನು ಠಾಣೆಯಲ್ಲಿಯೇ ಕೇಸಿಗೆ ಅನುಕೂಲ ಆಗುವಂತೆ ಸೃಷ್ಟಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ, ಮುದ್ದೆ ಮಾಲಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.ದಿ:**23-09-2025.**